## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

# ಸಿ.ಸಿ. ಸಂಖ್ಯೆಃ 776/2024

**ಸಾಕ್ಷಿಯನ್ನು ದಿಃ 02.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಸ್ವಾಮಿ | ಸಿಡಬ್ಲ್ಯೂಃ 6 | ಪಿಡಬ್ಲ್ಯೂಃ 8 |
| ತಂದೆಯ ಹೆಸರು | ರಾಮಯ್ಯ | | |
| ವಯಸ್ಸು | 45 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಮುಮ್ಮಡಿ ಕಾವಲ್ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಸಾಕ್ಷಿ ನಿಪಿ-4ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು ಎರಡು ವರ್ಷಗಳ ಹಿಂದೆ ಹುಣಸೂರು ಆಸ್ಪತ್ರೆಯ ಮುಂದೆ ಹಾಕಿದ್ದೇನೆ. ಯಾವ ಉದ್ದೇಶಕ್ಕಾಗಿ ಸಹಿ ಹಾಕಿದ್ದಿರಿ ಎಂದರೆ ಗಲಾಟೆ ನಡೆದು ಮುಗಿದು ಹೋಗಿತ್ತು ಸಾಕ್ಷಿಯಾಗಿ ಸಹಿ ಹಾಕು ಎಂದ ಕಾರಣ ಸಹಿ ಹಾಕಿದ್ದೇನೆ. ನಾನು ಸಹಿ ಹಾಕುವಾಗ ಸಂಜೆ 5-30 ಆಗಿತ್ತು. ನನ್ನ ಜೊತೆ ಚಾಸಾ-5 ರವರು ಸಹಿ ಹಾಕಿದ್ದಾರೆ. ನಿಪಿ-4 ರಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

ಚಾಸಾ-1 ಮತ್ತು ಆರೋಪಿತರ ಮಧ್ಯೆ ಗಲಾಟೆಯಾದ ಸಂಬಂಧ ಪೋಲಿಸರು ನೋಟೀಸ್ ನೀಡಿ ದಿಃ 07.12.2023 ರಂದು ಘಟನಾ ಸ್ಥಳದಲ್ಲಿ ಚಾಸಾ-2 ರವರು ಹಾಜರಿದ್ದು, ಸ್ಥಳ ತೋರಿಸಿದ ಮೆರೇಗೆ ನನ್ನ ಮತ್ತು ಚಾಸಾ-5 ರವರ ಸಮಕ್ಷಮ ನಿಪಿ-4ರ ಮಹಜರನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಮಾಡಲಾಗಿದೆ ಎಂದರೆ ಸರಿಯಲ್ಲ.

ನನಗೆ ನಿಪಿ-4ರಲ್ಲಿ ಬರೆದ ವಿಷಯಗಳು ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. MRH ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.